ದಿನಾಂಕ 03-10-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು: 5 ನೇ ಪ್ರತಿವಾದಿ ಪರ ಶ್ರೀ ಸಿ.ಆರ್.ಪಿ. ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ . ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ನಮ್ಮ ತಂದೆಯೇ ಕುಟುಂಬದ ಯಜಮಾನ ಎಂದರೆ ಸರಿ. ಮಕ್ಕಳ ವಿದ್ಯಾಭ್ಯಾಸ-ವಿವಾಹ ಇತರೆ ನಿರ್ವಹಣೆಯನ್ನು ನನ್ನ ತಂದೆಯೇ ನಿರ್ವಹಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ರವರು ನಿರ್ವಹಿಸಿರುತ್ತಾರೆ. ನನಗೆ ಯಾವ ವರ್ಷದಲ್ಲಿ ವಿವಾಹ ಆಯಿತು ಎಂದು ನೆನಪಿಲ್ಲ. 2 ಮತ್ತು 3 ನೇ ವಾದಿಗಳ ವಿವಾಹವನ್ನು ನನ್ನ ತಂದೆ ನಿರ್ವಹಿಸಿರುತ್ತಾರೆ. ದಾವಾ ಸರ್ವೆ ನಂಬರ್ 419 ರಲ್ಲಿ ಒಟ್ಟು 4 ಎಕರೆ 9 ಗುಂಟೆ ಇದ್ದು ಈಗ ಬೇರೆ ಬೇರೆ ಪೋಡುಗಳಾಗಿರುತ್ತದೆ. ದಾವಾ ಸ್ವತ್ತಿನ ಚಕ್ಕುಬಂದಿ ನನಗೆ ತಿಳಿದಿಲ್ಲ.

2. ನನ್ನ ತಂದೆ ಅಷ್ಟೊಂದು ಸ್ಥಿತಿವಂತರಲ್ಲ ಎಂದರೆ ಸರಿ. ನನ್ನ ತಂದೆ ಮಕ್ಕಳ ವಿದ್ಯಾಭ್ಯಾಸ ಹಾಗೂ ವಿವಾಹಕ್ಕಾಗಿ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಶೆಡ್ಯೂಲ್ 3 ನೇ ಆಸ್ತಿಯನ್ನು ದಿನಾಂಕ 15-03-2007 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನನ್ನು ನಮ್ಮ ಗ್ರಾಮದಲ್ಲಿನ ನಮ್ಮ ಸಂಬಂಧಿಕರಿಗೆ ಕೊಟ್ಟು ವಿವಾಹ ಮಾಡಲಾಗಿದೆ ಎಂದರೆ ಸರಿ. ನಾನು ಅದೇ ಊರಿನಲ್ಲಿರುವ ಕಾರಣ ನನ್ನ ತಂದೆಯ ಕುಟುಂಬದ ಎಲ್ಲಾ ಹಾಗು-ಹೋಗುಗಳು ನನಗೆ ತಿಳಿದಿದೆ ಎಂದರೆ ಸರಿಯಲ್ಲ. ನಮ್ಮ ಹಾಗೂ 5 ನೇ ಪ್ರತಿವಾದಿ ಮನೆಗಳು ಅಕ್ಕಪಕ್ಕದಲ್ಲಿವೆ ಎಂದರೆ ಸರಿಯಲ್ಲ. ಸದರಿ ದಾವೆ ಆಸ್ತಿಯನ್ನು 2007 ರಲ್ಲಿ ಮಾರಾಟ ಮಾಡಿದ್ದರೂ ಸಹಿತ ನಾನು ಉಳಿದ ಪ್ರತಿವಾದಿಗಳೊಂದಿಗೆ ಶಾಮೀಲಾಗಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿ ಮಾರಾಟ ಮಾಡಿದ ಬಗ್ಗೆ ನನಗೆ ತಿಳಿದಿಲ್ಲ. ಯಾರನ್ನು ವಿಚಾರಿಸಿದರೂ ಸಹಿತ ಸದರಿ ವಿಚಾರ ನನಗೆ ತಿಳಿಸಿರುವುದಿಲ್ಲ.

3. ಇತ್ತೀಚೆಗೆ ಯಾವಾಗ ನಿಮ್ಮ ತಂದೆ ಮನೆಗೆ ಹೋಗಿದ್ದಿರಿ ಎಂಬ ವಕೀಲರ ಪ್ರಶ್ನೆಗೆ ವಿಭಾಗ ಕೇಳಲು ಹೋಗಿದ್ದೆ. ದಾವಾ 3 ನೇ ಆಸ್ತಿಯನ್ನು 2007 ರಲ್ಲಿಯೇ ಮಾರಾಟ ಮಾಡಿರುವುದರಿಂದ ಅದರಲ್ಲಿ ಯಾವುದೇ ಭಾಗದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿನವರೆಗೂ ಸದರಿ ಖರೀದಿ ಪತ್ರ ಹಾಗೂ ಹಕ್ಕು ಬದಲಾವಣೆ ವಹಿಯನ್ನು ಪ್ರಶ್ನಿಸಿರುವುದಿಲ್ಲ

ಎಂದರೆ ನಮಗೆ ಏನೂ ಗೊತ್ತಿಲ್ಲದ ಕಾರಣ ಪ್ರಶ್ನಿಸಿರುವುದಿಲ್ಲ. ನಮ್ಮ ಮಗಳನ್ನು ವಿವಾಹ ಮಾಡಿಕೊಳ್ಳದ ಕಾರಣ ಹಾಗೂ ನಮ್ಮನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ವಿಭಾಗಕ್ಕಾಗಿ ದಾವೆ ಹೂಡಿರುತ್ತೇನೆ. ದಾವಾ 3 ನೇ ಆಸ್ತಿ 5 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನನ್ನ ತಂದೆಗೆ ಸೇರಿದ ಜಮೀನು ಹಾಗೂ ದಾವಾ 3 ನೇ ಆಸ್ತಿ ಅಕ್ಕ-ಪಕ್ಕ ಇರುತ್ತವೆ ಎಂದರೆ ಸರಿ. 5 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ದಾರಿ ಬಿಡದ ಕಾರಣ ಈ ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ. ಆಸ್ತಿ ಮಾರಾಟ ಆಗಿರುವ ವಿಚಾರ ತಿಳಿದಿದ್ದರೂ ಸಹಿತ 5 ನೇ ಪ್ರತಿವಾದಿಯಿಂದ ದಾವಾ ಷೆಡ್ಯೂಲ್ 3 ನೇ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ದಾವಾ 3 ನೇ ಆಸ್ತಿಯ ಕಾನೂನು ಬದ್ದ ಖರೀದಿದಾರರು ಎಂದರೆ ಸರಿಯಲ್ಲ.

4. ನನ್ನ ತಂದೆ ಹಾಗೂ ನನ್ನ ತಾತ ಯಾವಾಗ ವಿಭಾಗ ಆದರು ಎಂದು ನನಗೆ ನೆನಪಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಹಾಗೂ ಅವರ ಸಹೋದರರು 1978 ರಲ್ಲಿ ಖರೀದಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ನನ್ನ ತಂದೆ ಇದ್ದಾಗ ಸಾಕಷ್ಟು ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ದಾವಾ ಸ್ವತ್ತು ಮೂಲತಃ ನನ್ನ ತಾತ ಧರ್ಮಪ್ಪನವರ ಹೆಸರಿನಲ್ಲಿದ್ದು ನಂತರ ನನ್ನ ತಂದೆಗೆ ಬಂದಿರುತ್ತದೆ. ನನ್ನ ತಂದೆ ಅನಕ್ಷರಸ್ಥರಾಗಿದ್ದು ಕೇವಲ ಸಹಿ ಮಾಡುತ್ತಿದ್ದರು. ಸಾಕ್ಷಿದಾರರಿಗೆ ಒಂದು ಫೋಟೋ ತೋರಿಸಲಾಗಿ ಅದರಲ್ಲಿ ಅವರ ತಂದೆ ಹಾಗೂ 5 ನೇ ಪ್ರತಿವಾದಿ ಇರುವುದನ್ನು ಒಪ್ಪಿಕೊಂಡಿರುತ್ತಾರೆ. ಸಾಕ್ಷಿದಾರರಿಗೆ ಒಂದು ಕ್ರಯಪತ್ರವನ್ನು ತೋರಿಸಲಾಗಿ ಅದರಲ್ಲಿನ ತಮ್ಮ ತಂದೆಯ ಫೋಟೋ ಹಾಗೂ ಸಹಿಯನ್ನು ನೋಡಿ ಗುರುತಿಸಿ ಒಪ್ಪಿದ ಮೇರೆಗೆ ಅದನ್ನು **ನಿಡಿ 1** ಎಂದು, ಅದರಲ್ಲಿನ ಸಾಕ್ಷಿದಾರರ ತಂದೆಯ ಫೋಟೋ ಹಾಗೂ ಸಹಿಯನ್ನು **ನಿಡಿ 1 ಎ** ಎಂದು, ಗುರುತಿಸಲಾಯಿತು.

**5 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.